# ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ.45,3ನೇ ಮಹಡಿ ಕೆ.ಎಸ್.ಹೆಚ್.ಡಿ.ಸಿ.ಲಿ ಕಾಂಪ್ಲೆಕ್ಸ್ ಮಹಾತ್ಮಗಾಂಧಿ ರಸ್ತೆ
ಬೆಂಗಳೂರು - 560 001
E-mail –jddekshdc@gmail.com

ಸಂಖ್ಯೆ.ಕೆ.ಎಸ್.ಹೆಚ್.ಡಿ.ಸಿ./ಟೂಲ್ ಕಿಟ್ಸ್/ 1517 / 2024-25 ದಿನಾಂಕ: 10/03/2025

**:ಪ್ರಕಟಣೆ:**

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದಿಂದ ಬಳ್ಳಾರಿ ಜಿಲ್ಲೆಯ ಕಸೂತಿ ಕಲೆಯ ಕರಕುಶಲಕರ್ಮಿಗಳಿಗೆ ಕಲೆಗಳನ್ನು ತಂತ್ರಜ್ಞಾನದ ಮೂಲಕ ಉನ್ನತೀಕರಣಗೊಳಿಸಲು ಸುಧಾರಿತ ಉಪಕರಣಗಳನ್ನು *(Improved Toolkits)* ಪೂರೈಕೆ ಮಾಡಲು ಈ ಕೆಳಕಂಡ ಸುಧಾರಿತ ಉಪಕರಣಗಳ ಪಟ್ಟಿ ಮತ್ತು ಷರತ್ತುಗಳನ್ವಯ ದರಪಟ್ಟಿಗಳನ್ನು ಆಯುಕ್ತರು, ಕರಕುಶಲ, ನವದೆಹಲಿರವರಿಂದ ಅಧಿಕೃತಗೊಂಡಿರುವ ಸರಬರಾಜುದಾರರಿಂದ ಆಹ್ವಾನಿಸಲಾಗಿದೆ.

Embroidery craft Tool kit

| S.N. | Tool Description | Qty |
|---|---|---|
| 1. | Stitching machine (ISI approved), Foot operated machine) | 1PC |
| 2. | Embroidery rounds frame small medium & large (8",10",12") | 2 PCS |
| 3. | Tracing paper sheet | 5 PCS |
| 4. | Zari needles for kasab, 1 taar 2 taar, 3 taar, 6 taar | 2 PCS Each |
| 5. | Pencil HB & B | 1 park each |
| 6. | Powder for tracing | 250 gm |
| 7. | Steel scale (1ft & 2ft) | 1 Pc Each |
| 8. | Measuring Tape (tailor) | 2 PCS |
| 9. | Scissor | 1PC |
| 10. | Thread Trimmer | 2 PCS |
| 11. | Seam ripper | 4 PCS |
| 12. | Zardozi Needles 9 upto 12 No. | 1 pack Each |
| 13. | Pattern cloth | 2PC |
| 14. | Finger Thimble | 5 PCS |

ಷರತ್ತು ಮತ್ತು ನಿಬಂಧನೆಗಳು: (Terms and conditions)

1. ನಮೂದಿಸಿರುವ ಸುಧಾರಿತ ಉಪಕರಣಗಳನ್ನು ಉತ್ತಮ ಗುಣಮಟ್ಟದಲ್ಲಿ ನೀಡತಕ್ಕದ್ದು.
2. ನಮೂದಿಸಿದ ಸುಧಾರಿತ ಉಪಕರಣಗಳಿಗೆ ಸರಿಯಾದ ಬೆಲೆ ನಿಗಧಿಪಡಿಸಿ ದರಪಟ್ಟಿಸಲ್ಲಿಸತಕ್ಕದ್ದು.
3. ಸಲ್ಲಿಸಿರುವ ದರಪಟ್ಟಿಗಳಲ್ಲಿ L1 ಸರಬರಾಜುದಾರರು ಒಂದು ವಾರದೊಳಗೆ ಸುಧಾರಿತ ಉಪಕರಣಗಳ ಮಾದರಿ (Sample) ನ್ನು ನಿಗಮದ ಕೇಂದ್ರ ಕಛೇರಿಗೆ ಸಲ್ಲಿಸಿಬೇಕು.
4. ಸುಧಾರಿತ ಉಪಕರಣಗಳ ಮಾದರಿ (Sample)ನ್ನು ಅನುಮೋದಿಸಿದ ನಂತರ ಪೂರ್ಣಪ್ರಮಾಣದ ಉಪಕರಣಗಳನ್ನು ಸಲ್ಲಿಸತಕ್ಕದ್ದು.
5. ಸರಬರಾಜು ಮಾಡಿದ ಉಪಕರಣಗಳಲ್ಲಿ ಗುಣಮಟ್ಟದ ವ್ಯಾತ್ಯಾಸ ಕಂಡುಬಂದಲ್ಲಿ ಸರಬರಾಜುದಾರರು ವಿನಿಮಯ ಮಾಡಿಕೊಡತಕ್ಕದ್ದು.
6. ಅನುಮೋದಿತ ಉಪಕರಣಗಳೊಂದಿಗೆ ಸರಬರಾಜುದಾರರ ಮೂಲ ಜಿ.ಎಸ್.ಟಿ. ಬಿಲ್ ಸಲ್ಲಿಸತಕ್ಕದ್ದು.
7. ಎಲ್ಲಾ ಸುಧಾರಿತ ಉಪಕರಣಗಳನ್ನು ಗ್ಯಾರಂಟಿ ಮತ್ತು ವಾರಂಟಿಯೊಂದಿಗೆ ನಿಗಧಿತ ಅವಧಿಯಲ್ಲಿ ಸರಬರಾಜು ಮಾಡತಕ್ಕದ್ದು, ಸದರಿ ಉಪಕರಣಗಳಲ್ಲಿ ಯಾವುದಾದರು ನ್ಯೂನತೆ ಕಂಡುಬಂದಲ್ಲಿ ತಾವುಗಳೇ ನೇರವಾಗಿ ಹೊಣೆಗಾರರಾಗುತ್ತಿರಿ.
8. ಒಂದು ವೇಳೆ ನ್ಯೂನತೆ ಕಂಡುಬಂದ ಸುಧಾರಿತ ಉಪಕರಣಗಳನ್ನು ಬದಲಾಯಿಸಿ ನೂತನ ಉಪಕರಣಗಳನ್ನು ಕಡ್ಡಾಯವಾಗಿ ನೀಡತಕ್ಕದ್ದು.
9. ಸುಧಾರಿತ ಉಪಕರಣಗಳನ್ನು ಸರಬರಾಜು ಮಾಡುವ ಕಾರ್ಯಾದೇಶ ಸ್ವೀಕರಿಸಿದ ಮೂರು ದಿನದೊಳಗೆ(03)ಒಟ್ಟು ಮೊತ್ತಕ್ಕೆ 5% ರಷ್ಟು ಠೇವಣಿ ಮಾಡಬೇಕು. (Towards Performance Guarantee)
10. ನಿಗಮವು ಯಾವುದೇ ಕಾರಣಗಳನ್ನು ನೀಡದೇ ದರಪಟ್ಟಿಯ ಅರ್ಜಿಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.
11. ಸರಬರಾಜು ಮಾಡಿದ ಉಪಕರಣಗಳನ್ನು ನಿಗಮವು ನಿಯೋಜಿಸಿದ ಡಿ.ಸಿ.(ಹೆಚ್) ಸಿಬ್ಬಂದಿ/ ಅಧಿಕಾರಿ/ ಏಜೆನ್ಸಿ ತಂಡವು ನಿಗಧಿತ ಮಾನದಂಡನೆಗಳಿಗುಣವಾಗಿ ಸರಬರಾಜು ಮಾಡಲಾಗಿದೆಯೇ? ಎಂಬುದನ್ನು ಪರಿಶೀಲಿಸಿ ಖಾತರಿಪಡಿಸಿಕೊಳ್ಳುವುದು. ನಿಗಧಿತ ಮಾನದಂಡಕ್ಕೆ ಹೊಂದಾಣಿಕೆ ಆಗದಿದ್ದಲ್ಲಿ ಸಂಪೂರ್ಣ ಉಪಕರಣಗಳನ್ನು ಸರಬರಾಜುದಾರರ ಸ್ವಂತ ವೆಚ್ಚದಲ್ಲಿ ಹಿಂಪಡೆದು. ಉತ್ತಮ ಗುಣಮಟ್ಟದ ಉಪಕರಣಗಳನ್ನು ಸರಬರಾಜು ಮಾಡುವುದು.

ಮೇಲ್ಕಂಡ ಉಪಕರಣಗಳ ಪಟ್ಟಿ ಹಾಗೂ ಷರತ್ತು ಮತ್ತು ನಿಬಂಧನೆಗಳಿಗೆ ಆಸಕ್ತಿವುಳ್ಳ ಸರಬರಾಜುದಾರರು / ಅರ್ಹ ಸಂಸ್ಥೆಗಳು ದಿನಾಂಕ:10/03/2025 ರಿಂದ 17/03/2025 ರಂದು ಮಧ್ಯಾಹ್ನ 2:00 ಗಂಟೆಯವರೆಗೆ ಸಂಬಂಧಿಸಿದ ವಿವರಗಳನ್ನು ದ್ವಿ–ಲಕೋಟೆಯಲ್ಲಿ ಕೇಂದ್ರ ಕಛೇರಿಯಲ್ಲಿ ನೇರವಾಗಿ ಸಲ್ಲಿಸತಕ್ಕದ್ದು.

(ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿಸಲ್ಪಟ್ಟಿದೆ).

ಪ್ರಧಾನ ವ್ಯವಸ್ಥಾಪಕರು (ಅಭಿವೃದ್ಧಿ)